ಒಂದು ಸೂಕ್ತ ಜಾಗವೂ ಇರುವುದಿಲ್ಲ. ಬದಲಿಗೆ ಆರಾಮಾಗಿ ಬೇರೆ ಮಾರ್ಗ ಹಿಡಿದು ಸುಲಭವಾಗಿ ಬರಬಹುದಲ್ಲ! ಎಂದು ನಮಗನ್ನಿಸಿದರೆ ಅದಕ್ಕೆ ಮಾತ್ರ ಇದೇ ಸುಗಮ ಹಾದಿ. ಪ್ರಕೃತಿ ಸೂಚಿಸಿದ ಈ ಕಠಿಣ ಹಾದಿಯಲ್ಲೇ ಪ್ರತಿ ವರ್ಷವೂ ಬಂದು ಹೋಗುವ ಇದರ ಶಕ್ತಿ ಮತ್ತು ಸಾಮರ್ಥ್ಯಗಳ ಬಗ್ಗೆ ಯೋಚಿಸಿದರೆ ಹೆಮ್ಮೆ ಎನಿಸುತ್ತದೆ. ನಮ್ಮ ಕಣ್ಣಿಗೆ ಕಷ್ಟ ಎನಿಸುವ ಸಂಗತಿಗಳು ಪ್ರಾಣಿ– ಪಕ್ಷಿಗಳ ಪಾಲಿಗೆ ಹಿತವೂ, ಸರಳವೂ ಆಗಿರುವುದು ಕೂಡ ಈ ಸೃಷ್ಟಿಯ ಚಮತ್ಕಾರದಲ್ಲೊಂದು.

ಇಪ್ಪತ್ತೇಳು ಸಾವಿರ ಅಡಿ ಎತ್ತರದಲ್ಲಿ ಹಾರುವ ಮೊದಲು ಈ ಹಕ್ಕಿ ಅದಕ್ಕೆ ತಕ್ಕನಾಗಿ ತನ್ನ ದೇಹದಲ್ಲಿ ಕೊಬ್ಬನ್ನು ತುಸು ಹೆಚ್ಚೇ ಶೇಖರಿಸಿಕೊಳ್ಳುತ್ತದೆ. ಏಕೆಂದರೆ ವಲಸೆ ಹೊರಟು ಭಾರತದ ನೆಲ ತಲುಪುವವರೆಗೂ ಅದಕ್ಕೆ ಆಹಾರ ಸಿಗುವುದಿಲ್ಲ. ಆ ಕಾಲಕ್ಕೆ ಅದರ ಉಪಯೋಗಕ್ಕೆ ಬರುವುದೇ ಈ ಕೊಬ್ಬಿನ ಅಂಶ. ಹೆಚ್ಚು ದೂರದವರೆಗೆ ಪಯಣಿಸುತ್ತಾ ಮಂಜಿನ ಹೊಡೆತಗಳನ್ನು ಸಹಿಸಿಕೊಂಡು ಹಾರಲು ಇದಕ್ಕೆ ಗಟ್ಟಿಮುಟ್ಟಾದ ಸ್ನಾಯುಗಳ ಬೆಂಬಲ ಬೇಕು. ಈ ಶಕ್ತಿ ಇದರ ದೇಹಕ್ಕಿದೆ. ತೀರಾ ಶ್ರಮ ಎನಿಸುವ ಈ ಕಠಿಣ ಹಾದಿಯಲ್ಲೇ ಇದು ಏಕೆ ಕ್ರಮಿಸಿ ಬರುತ್ತದೆ? ಇದರಿಂದ ಇದಕ್ಕೆ ತೊಂದರೆ ಆಗುವುದಿಲ್ಲವೇ? ಖಂಡಿತಾ ಗೊತ್ತಿಲ್ಲ! ಅನೇಕ ಸಲ ನಮಗೆ ಅಸಾಧ್ಯ ಎನಿಸುವ ಸಂಗತಿಗಳು ಪಕ್ಷಿಗಳ ಪಾಲಿಗೆ ನಗಣ್ಯವಾಗಿಯೂ ಇರಬಹುದಲ್ಲವೇ?

ಪಟ್ಟೆತಲೆ ಹೆಬ್ಬಾತು ಆಹಾರ ಮಾತ್ರ ಹುಡುಕಿ ಕೊಂಡು ಭಾರತಕ್ಕೆ ಬಂದು ಐದು ತಿಂಗಳ ಕಾಲ ನೆಲೆಸುತ್ತದೆ. ಇದು ಬಾತುಕೋಳಿ ಜಾತಿಯಾದ ಕಾರಣ ನೀರಿನ ಮೇಲೆ ವಾಸಿಸುತ್ತದೆ. ಈ ಕಾರಣದಿಂದ ಉಳಿದ ಬಾತುಗಳಂತೆ ಮೀನು ಇತ್ಯಾದಿ ಜಲಚರಗಳನ್ನು ತಿಂದು ಬದುಕುತ್ತದೆ ಎಂದು ನಾವು ತಪ್ಪಾಗಿ ಭಾವಿಸಬಾರದು. ಕೆಲ ಹುಳಹುಪಟ್ಟೆ ಬಿಟ್ಟರೆ ಇದು ಹೆಚ್ಚಾಗಿ ತಿನ್ನುವುದು ಕಾಳು ಮತ್ತು ಧಾನ್ಯಗಳನ್ನು ಮಾತ್ರ. ಒಂದರ್ಥದಲ್ಲಿ ವೆಜಿಟೇರಿಯನ್! ಮರದ ಬೇರುಗಳು, ಪಾಚಿ ಮತ್ತು ಹುಲ್ಲನ್ನು ತನ್ನ ಜೀರ್ಣಶಕ್ತಿ ವೃದ್ಧಿಸಿಕೊಳ್ಳಲು ತಿನ್ನುತ್ತವೆ. ನಸುಕಲ್ಲೇ ನೀರಿನಿಂದ ಹಾರಿ ರೈತರ ಹೊಲಗಳಿಗೆ ದಾಳಿಯಿಡುವ ಈ ಬಾತುಗಳು ಭತ್ತ, ಗೋಧಿ, ಜೋಳ, ಕಡಲೆ, ಸಜ್ಜೆ, ಶೇಂಗಾ ಕಾಯಿಗಳನ್ನು ಆರಿಸಿ ತಿನ್ನುತ್ತವೆ. ಎಂಟು ಗಂಟೆಯ ಹೊತ್ತಿಗೆ ಮತ್ತೆ ಮರಳಿ ನೀರಿಗೆ ಬಂದು ನಿದ್ದೆ ಬಾರಿಸುತ್ತವೆ. ನೀರಿನಲೆಗಳ ಮೇಲೆ ತೊಟ್ಟಿಲಲ್ಲಿ ತೂಗಿಸಿ ಮಲಗಿದಂತೆ ತೇಲುವ ಈ ಹಕ್ಕಿಗಳು ಮತ್ತೆ ಆಹಾರ ಕಬಳಿಸಲು ರೈತರ ಹೊಲಗಳಿಗೆ ನುಗ್ಗುವುದು ಮಧ್ಯಾಹ್ನದ ಮೇಲೆ. ಸಂಜೆ ಹಿಟ್ಟು ನುಂಗಿ ವಾಪಸ್ಸಾಗಿ ರಾತ್ರಿಯಿಡೀ ನೀರಿನ ಮೇಲಿದ್ದು ಗುಂಪಾಗಿ ಜಾಗೃತವಾಗಿದ್ದು ನಿದ್ದೆ ಜಡಿಯುತ್ತವೆ. ಆ ಸಮಯದಲ್ಲಿ ಕೆಲ ಕಾವಲುಗಾರ ಹಕ್ಕಿಗಳು ಸರದಿಯ ಪ್ರಕಾರ ಗುಂಪನ್ನು ಕಾಯುತ್ತವೆ. ಸಣ್ಣ ಅಪಾಯ ಬಂದರೂ ಮೊದಲು ನಾಯಕ ಬೊಬ್ಬೆ ಬಾರಿಸಿ ಉಳಿದ ಎಲ್ಲರಿಗೆ ತಕ್ಷಣ ಹಾರುವಂತೆ ತಾಕೀತು ಮಾಡುತ್ತಾನೆ. ಒರಿಸ್ಸಾದ ಚಿಲಿಕಾ ಸರೋವರದ ಬಳಿ ಶಿಕಾರಿ ಮಾಡುವವರು ರಾತ್ರಿ ಇವುಗಳ ಬೇಟೆಯಾಡುತ್ತಿದ್ದರು. 'ಇವುಗಳನ್ನು ಹಿಡಿಯಲು ಹೋದಾಗ ಸತ್ತವರ ಮನೆಯಲ್ಲಿ ಬೊಬ್ಬೆ ಹಾಕುವಂತೆ ಕಿರುಚಾಡಿ ರಾದ್ಧಾಂತ ಎಬ್ಬಿಸುತ್ತವೆ. ಆದ್ದರಿಂದ ಶಿಕಾರಿ ಮಾಡುವುದು ಉಳಿದ ಬಾತುಪಕ್ಷಿಗಳಂತೆ ಸಲೀಸಲ್ಲ. ಒಂದು ಸಿಕ್ಕಿ ಬಿದ್ದರೂ ಅದು ಉಳಿದವಕ್ಕೆ ಓಡಿ ಹೋಗುವಂತೆ ತಕ್ಷಣ ಎಚ್ಚರಿಕೆಯ ದನಿ ರವಾನಿಸುತ್ತದೆ. ತನ್ನ ಪ್ರಾಣ ಹೋದರೂ ಸರಿಯೇ ಗುಂಪಿನ ಮೇಲೆ ಆಗುವ ದಾಳಿಯನ್ನು ತಪ್ಪಿಸಿಯೇ ತೀರುತ್ತವೆ' ಎಂದು ಹೇಳಿದ್ದ.

ಇವು ಆಗಸದಲ್ಲಿ ಗುಂಪಾಗಿ ಹಾರುವಾಗ 'ವಿ' ಆಕಾರದಲ್ಲಿ ಚಲಿಸುತ್ತವೆ. ಹೀಗೆ ಸಾಗುವುದರಿಂದ ಹೆಚ್ಚು ಆಯಾಸ ಇವುಗಳಿಗೆ ಆಗುವುದಿಲ್ಲ. ಮುಂದೆ ಗುಂಪಿನ ನಾಯಕನಿದ್ದು ಆತ ಸಾಗಿದ ಕಡೆಗೇ ಇವು ಹಿಂಬಾಲಿಸಿ ಹೋಗುತ್ತವೆ. ಮುಂದಿನ ನಾಯಕ ಹೆಚ್ಚು ರೆಕ್ಕೆಯನ್ನು ಬಡಿದು ಗಾಳಿಯನ್ನು ಹಿಂದಕ್ಕೆ ತಳ್ಳಿ ಹಿಂದೆ ಬರುವ ತನ್ನ ಗುಂಪಿಗೆ ಆಯಾಸವಾಗದಂತೆ ಸಹಾಯ ಮಾಡುತ್ತಾನೆ. ಅನೇಕ ಗಂಟೆಗಳ ಕಾಲ ಆತ ಹೆಚ್ಚು ರೆಕ್ಕೆ ಬಡಿಯುವುದರಿಂದ ಅವನಿಗೂ ಆಯಾಸವಾಗುತ್ತದೆ. ಆಗ ನಾಯಕನ ಹಿಂದಿರುವ ಪಕ್ಷಿ ಮುಂದೆ ಬಂದು ನಾಯಕನನ್ನು ಸಾಲಿನ ಕೊನೆಗೆ ಕಳಿಸುತ್ತದೆ. ಅಲ್ಲಿ ಆತ ವಿಶ್ರಾಂತಿ ಪಡೆಯುತ್ತಾ ಮುಂದಿನವರು ತಳ್ಳಿದ ಗಾಳಿಯಲ್ಲಿ ಹೆಚ್ಚು ಶ್ರಮವಿಲ್ಲದೆ ಹಾರುತ್ತಾನೆ.